# ಅಂಕಣ ಕಂ-ಕಣ...

## ಪುಟ ತೆರೆದಾಗ-ಮನಸ್ಸೂ ತೆರೆದುಕೊಳ್ಳಲಿ

ಓದಲು ಕುಳಿತಿದ್ದೆ? ಆದರೆ ಏನೂ ಓದಲಾಗಲಿಲ್ಲ!" ಈ ಮಾತು ಇತ್ತೀಚೆಗೆ ವಿದ್ಯಾರ್ಥಿಗಳ ಬಾಯಲ್ಲಿ ಆಗಾಗ ಕೇಳಿಬರುತ್ತದೆ.. ಓದಲು ಪುಸ್ತಕವನ್ನು ಕಣ್ಣಮುಂದೆ ತೆರೆದಿಟ್ಟುಕೊಂಡು ಕುಳಿತಿ-ರುತ್ತಾರೆ. ಕಣ್ಣುಗಳು ಮಾತ್ರ ಅಕ್ಷರಗಳ ಮೇಲೆ ಓಡಾಡುತ್ತಿರುತ್ತವೆ; ಆದರೆ ಮನಸ್ಸು ಮಾತ್ರ ಎಲ್ಲೋ ದೂರ. ಐದು ನಿಮಿಷಕ್ಕೊಮ್ಮೆ ಮೊಬೈಲ್ ನೋಡಬೇಕು ಎನ್ನಿಸುತ್ತದೆ. ಸ್ವಲ್ಪ ಹೊತ್ತಿನಲ್ಲೇ ಬೇಸರ. ಇನ್ನೊಂದಷ್ಟು ಹೊತ್ತಿಗೆ, "ನಾಳೆಯಿಂದ ಚೆನ್ನಾಗಿ ಓದುತ್ತೇನೆ" ಎಂಬ ಸಮಾಧಾನ. ಹೀಗೆ ನಾಳೆ, ನಾಡಿದ್ದು ಎಂದು ಮುಂದೂಡುತ್ತಾ ಪರೀಕ್ಷೆಯ ದಿನ ಹತ್ತಿರ ಬಂದಾಗ ಮಾತ್ರ ಪುಸ್ತಕದ ಪುಟಗಳು ಆತಂಕ ಹುಟ್ಟಿಸಲಾರಂಭಿಸುತ್ತವೆ.

**ಅಂಕಣ: ಶೈಕ್ಷಣಿಕ ದಾಹ**



ಆದರೆ ಒಮ್ಮೆ ನಮ್ಮನ್ನೇ ನಾವು ಕೇಳಿಕೊಳ್ಳೋಣ.. 'ಓದು ನಿಜವಾಗಿಯೂ ಇಷ್ಟೊಂದು ಕಷ್ಟವೇ?' ಬಹುಶಃ ಇಲ್ಲ. ಓದನ್ನು ನಾವು ಕೇವಲ ಪರೀಕ್ಷೆ, ಅಂಕ, ಫಲಿತಾಂಶಗಳೊಂದಿಗೆ ಬೆಸೆದುಕೊಂಡಿರುವುದೇ ಅದರ ಮೇಲಿನ ಭಾರವನ್ನು ಹೆಚ್ಚಿಸಿದೆ. ಓದು ಎಂದರೆ ಪರೀಕ್ಷೆಯ ಹಿಂದಿನ ರಾತ್ರಿ ಪುಸ್ತಕದ ಮುಂದೆ ಕುಳಿತುಕೊಳ್ಳುವುದಲ್ಲ. ಅದು ನಿಧಾನವಾಗಿ ನಮ್ಮೊಳಗೆ ಬೆಳಕು ತುಂಬುವ ಪ್ರಕ್ರಿಯೆ. ಒಂದು ಹೊಸ ವಿಚಾರವನ್ನು ತಿಳಿಯುವ ಕುತೂಹಲ. ನಮಗೆ ಗೊತ್ತಿಲ್ಲದ ಜಗತ್ತನ್ನು ಪರಿಚಯಿಸಿಕೊಳ್ಳುವ ಅವಕಾಶ. ಕೆಲವೊಮ್ಮೆ ನಮ್ಮನ್ನೇ ನಮಗೆ ಪರಿಚಯಿಸುವ ಒಂದು ಸುಂದರ ಪಯಣ.

ಬಾಲ್ಯದಲ್ಲಿ ಪುಸ್ತಕದ ಚಿತ್ರಗಳನ್ನು ನೋಡುತ್ತಾ ಕಥೆ ಕೇಳುತ್ತಿದ್ದಾಗ ಓದು ನಮಗೆ ಆಟದಂತಿತ್ತು. ಬೆಳೆದಂತೆ ಅದೇ ಪುಸ್ತಕ 'ಓದಲೇಬೇಕಾದ ಪಾಠ'ವಾಗಿ ಬದಲಾಯಿತು. ಅಲ್ಲಿಂದ ಓದಿನ ಮೇಲಿನ ಸಹಜ ಆಸಕ್ತಿ ನಿಧಾನವಾಗಿ ಕಡಿಮೆಯಾಗಲಾರಂಭಿಸಿತು. ಹೀಗಾಗಿ ಮೊದಲು ಬದಲಾಯಿಸಬೇಕಿರುವುದು ಪುಸ್ತಕವಲ್ಲ; ಓದಿನ ಬಗ್ಗೆ ನಮ್ಮ ಮನಸ್ಸಿನಲ್ಲಿರುವ ಭಾವನೆ.

ಓದು ಎಂದರೆ ಕೇವಲ ಅಕ್ಷರಗಳನ್ನು ಜೋಡಿಸಿ ಪದಗಳನ್ನು ಓದುವುದಲ್ಲ. ಅದು ಪದಗಳ ಹಿಂದಿರುವ ಅರ್ಥವನ್ನು ಅರಿಯುವುದು, ಪ್ರಶ್ನಿಸುವುದು, ಯೋಚಿಸುವುದು, ವಿಶ್ಲೇಷಿಸುವುದು ಮತ್ತು ತಿಳಿದದ್ದನ್ನು ಬದುಕಿನೊಂದಿಗೆ ಬೆಸೆಯುವುದು. ಒಂದು ಪುಸ್ತಕದ ಪುಟವನ್ನು ತೆರೆದಾಗ ನಮ್ಮ ಮುಂದೆ ಕೇವಲ ಅಕ್ಷರಗಳ ಸಾಲುಗಳು ತೆರೆದುಕೊಳ್ಳುವುದಿಲ್ಲ; ಒಂದು ಹೊಸ ಲೋಕವೇ ತೆರೆದುಕೊಳ್ಳುತ್ತದೆ.

ದೃಶ್ಯಮಾಧ್ಯಮಗಳು ನಮಗೆ ಎಲ್ಲವನ್ನೂ ತೋರಿಸುತ್ತವೆ. ಆದರೆ ಪುಸ್ತಕ ಎಲ್ಲವನ್ನೂ ನಾವೇ ಕಲ್ಪಿಸಿಕೊಳ್ಳುವಂತೆ ಮಾಡುತ್ತದೆ. ಕಥೆಯೊಂದನ್ನು ಓದುವಾಗ ಅದರ ಪಾತ್ರಗಳಿಗೆ ನಮ್ಮ ಮನಸ್ಸು, ನಮ್ಮ ಕಲ್ಪನೆಯೇ ಬಣ್ಣವನ್ನು ಹಚ್ಚುತ್ತದೆ. ಘಟನೆಯೊಂದಕ್ಕೆ ನಮ್ಮ ಅನುಭವವೇ ಅರ್ಥವನ್ನು ನೀಡುತ್ತದೆ. ಪುಸ್ತಕ ಕಣ್ಣುಗಳ ಮುಂದೆ ಒಂದು ಲೋಕವನ್ನು ತೆರೆದಿಡುವುದಷ್ಟೇ ಅಲ್ಲ; ನಮ್ಮೊಳಗೇ ಒಂದು ಹೊಸ ಲೋಕವನ್ನು ಸೃಷ್ಟಿಸುತ್ತದೆ.

ಒಳ್ಳೆಯ ಪುಸ್ತಕವೊಂದು ಒಳ್ಳೆಯ ಸ್ನೇಹಿತನಂತೆ. ಅದು ನಮ್ಮೊಂದಿಗೆ ಮಾತನಾಡುವುದಿಲ್ಲವಾದರೂ ನಮ್ಮ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡುತ್ತದೆ. ನಮ್ಮ ಸಂಕಟಗಳನ್ನು ಕೇಳುವುದಿಲ್ಲವಾದರೂ ಅವುಗಳನ್ನು ಎದುರಿಸುವ ಧೈರ್ಯವನ್ನು ನೀಡುತ್ತದೆ. ಬದುಕಿನಲ್ಲಿ ಯಾವ ದಾರಿಯನ್ನು ಹಿಡಿಯಬೇಕು ಎಂಬ ಗೊಂದಲದಲ್ಲಿ ನಿಂತಾಗ ಕೆಲವೊಮ್ಮೆ ಒಂದು ಪುಸ್ತಕದ ಒಂದೇ ಒಂದು ಸಾಲು ಬದುಕಿನ ದಿಕ್ಕನ್ನೇ ಬದಲಿಸಬಹುದು.

ಆದರೆ ಓದುವುದಕ್ಕೂ ಒಂದು ಕ್ರಮ ಬೇಕು. ಪುಸ್ತಕದ ಮುಂದೆ ಗಂಟೆಗಟ್ಟಲೆ ಕುಳಿತಿರುವುದೇ ಉತ್ತಮ ಓದು ಎನ್ನಲಾಗದು. ಓದಿದ್ದು ಮನಸ್ಸಿಗೆ ಇಳಿಯಬೇಕು. ಅರ್ಥವಾಗಬೇಕು. ನಮ್ಮ ಅನುಭವದೊಂದಿಗೆ ಬೆರೆಯಬೇಕು. ಅರ್ಥ ಮಾಡಿಕೊಳ್ಳದೆ ಬಾಯಿಪಾಠ ಮಾಡಿದ ವಿಷಯ ಪರೀಕ್ಷೆಯ ನಂತರ ಮರೆಯಾಗಬಹುದು. ಆದರೆ ಅರ್ಥೈಸಿಕೊಂಡು ಕಲಿತ ವಿಷಯ ಬಹುಕಾಲ ನಮ್ಮೊಂದಿಗೇ ಉಳಿಯುತ್ತದೆ.

### ಹಾಗಾದರೆ ಓದುವುದು ಹೇಗೆ?

ಮೊದಲಿಗೆ ಓದಲು ಕುಳಿತುಕೊಳ್ಳುವ ಮುನ್ನ ಸಣ್ಣ ಗುರಿ ನಿಗದಿಪಡಿಸಿಕೊಳ್ಳಿ. "ಇಂದು ಇಡೀ ಅಧ್ಯಾಯ ಮುಗಿಸಬೇಕು" ಎನ್ನುವುದಕ್ಕಿಂತ "ಈ ಅಧ್ಯಾಯದ ಮುಖ್ಯ ವಿಚಾರಗಳನ್ನು ಅರ್ಥಮಾಡಿಕೊಳ್ಳಬೇಕು" ಎನ್ನುವುದು ಉತ್ತಮ. ದೊಡ್ಡ ಪಾಠವನ್ನು ಸಣ್ಣ ಭಾಗಗಳಾಗಿ ವಿಂಗಡಿಸಿಕೊಂಡಾಗ ಓದು ಸುಲಭವಾಗುತ್ತದೆ.

ಓದುವಾಗ "ಇದರ ಅರ್ಥವೇನು?", "ಇದು ಏಕೆ?", "ಇದನ್ನು ನನ್ನದೇ ಮಾತುಗಳಲ್ಲಿ ಹೇಗೆ ಹೇಳಬಹುದು?" ಎಂದು ನಿಮ್ಮನ್ನೇ ನೀವು ಪ್ರಶ್ನಿಸಿಕೊಳ್ಳಿ. ಒಂದು ಭಾಗವನ್ನು ಓದಿದ ಬಳಿಕ ಪುಸ್ತಕವನ್ನು ಮುಚ್ಚಿ, ಓದಿದ್ದನ್ನು ನೆನಪಿಸಿಕೊಳ್ಳಿ. ಮುಖ್ಯ ಅಂಶಗಳನ್ನು ಬರೆಯಿರಿ. ಅರ್ಥವಾಗದ ಜಾಗವನ್ನು ಗುರುತಿಸಿ ಮತ್ತೆ ಓದಿ. ಓದಿದ್ದನ್ನು ಬರೆಯುವುದು, ಸ್ನೇಹಿತರೊಂದಿಗೆ ಚರ್ಚಿಸುವುದು, ಶಿಕ್ಷಕರಲ್ಲಿ ಕೇಳಿ ತಿಳಿದುಕೊಳ್ಳುವುದು, ಹಿಂದಿನ ಪ್ರಶ್ನೆಪತ್ರಿಕೆಗಳನ್ನು ಅಭ್ಯಾಸ ಮಾಡುವುದು ಇವೆಲ್ಲವೂ ಓದನ್ನು ಗಟ್ಟಿಗೊಳಿಸುವ ಸರಳ ವಿಧಾನಗಳು.

ಓದಿನ ನಡುವೆ ವಿರಾಮವೂ ಬೇಕು. ನಿರಂತರವಾಗಿ ಪುಸ್ತಕದ ಮುಂದೆ ಕುಳಿತಿರುವುದೇ ಏಕಾಗ್ರತೆ ಎಂದಲ್ಲ. ಸುಮಾರು 40?50 ನಿಮಿಷ ಓದಿದ ಬಳಿಕ ಸ್ವಲ್ಪ ವಿರಾಮ ಪಡೆಯಬಹುದು. ಆದರೆ ಆ ವಿರಾಮ ಮೊಬೈಲ್‌ನಲ್ಲಿ ಮುಳುಗುವ ಸಮಯವಾಗದಿರಲಿ. ಸ್ವಲ್ಪ ನಡೆದಾಡಿ, ನೀರು ಕುಡಿದು, ಕಣ್ಣುಗಳಿಗೆ ವಿಶ್ರಾಂತಿ ನೀಡಿ ಮತ್ತೆ ಓದಿಗೆ ಮರಳಬಹುದು. ಒಮ್ಮೆ ಓದಿದರೆ ಸಾಕೆಂದುಕೊಳ್ಳಬೇಡಿ. ಪುನರ್‌ಮನನವೇ ನೆನಪಿನ ಸೇತುವೆ. ಇಂದು ಓದಿದ್ದನ್ನು ನಾಳೆ ಮತ್ತೆ ನೆನಪಿಸಿಕೊಳ್ಳಿ. ಕೆಲವು ದಿನಗಳ ಬಳಿಕ ಮತ್ತೆ ಪರಿಶೀಲಿಸಿ. ಕೊನೆಯ ಕ್ಷಣದಲ್ಲಿ ಎಲ್ಲವನ್ನೂ ಓದುವುದಕ್ಕಿಂತ ಪ್ರತಿದಿನ ಸ್ವಲ್ಪ ಸ್ವಲ್ಪವಾಗಿ ಓದಿ ಪುನರಾವರ್ತಿಸುವುದು ಹೆಚ್ಚು ನೆಮ್ಮದಿ ನೀಡುತ್ತದೆ.

ಮುಖ್ಯವಾಗಿ, ನಿಮ್ಮನ್ನು ಮತ್ತೊಬ್ಬರೊಂದಿಗೆ ಹೋಲಿಸಿಕೊಳ್ಳಬೇಡಿ. ಪ್ರತಿಯೊಬ್ಬರ ಕಲಿಕೆಯ ವೇಗವೂ ವಿಭಿನ್ನ. "ಅವನು ಇಷ್ಟು ಓದಿದ್ದಾನೆ, ನಾನು ಇನ್ನೂ ಇಷ್ಟೇ ಓದಿದ್ದೇನೆ" ಎಂಬ ಆತಂಕ ಓದಿಗೆ ನೆರವಾಗುವುದಿಲ್ಲ. ನಿನ್ನೆಗಿಂತ ಇಂದು ಸ್ವಲ್ಪ ಹೆಚ್ಚು ಅರ್ಥ ಮಾಡಿಕೊಂಡಿದ್ದರೆ ಅದೇ ಪ್ರಗತಿ.

ಪರೀಕ್ಷೆಗಾಗಿ ಓದುವುದು ಅಗತ್ಯ. ಆದರೆ ಬದುಕಿಗಾಗಿ ಓದುವುದು ಇನ್ನೂ ಅಗತ್ಯ. ಪರೀಕ್ಷೆಯ ಅಂಕಪಟ್ಟಿ ನಮ್ಮ ಒಂದು ಹಂತದ ಸಾಧನೆಯನ್ನು ಹೇಳಬಹುದು; ಅದರಾಚೆಗಿನ ಓದು ಮಾತ್ರ ನಮ್ಮ ಚಿಂತನೆಯ ಗುಣಮಟ್ಟವನ್ನು ರೂಪಿಸುತ್ತದೆ.

ಆದ್ದರಿಂದ, ಪುಸ್ತಕವನ್ನು ಕೇವಲ ಪರೀಕ್ಷೆಯ ಸಮಯದಲ್ಲಿ ತೆರೆಯುವ ವಸ್ತುವಾಗಿಸಬೇಡಿ. ಅದರೊಂದಿಗೆ ಸ್ನೇಹವನ್ನು ಬೆಳೆಸಿಕೊಳ್ಳಿ. ದಿನಕ್ಕೆ ಕೆಲವು ಪುಟಗಳಾದರೂ ಓದಿ. ಪ್ರಶ್ನಿಸಿ. ಅರ್ಥಮಾಡಿಕೊಳ್ಳಿ. ಬರೆಯಿರಿ. ಮತ್ತೆ ನೆನಪಿಸಿಕೊಳ್ಳಿ. ನಾವು ಓದುವ ಪ್ರತಿಯೊಂದು ಪುಟವೂ ನಮ್ಮೊಳಗೆ ಏನನ್ನೋ ಬದಲಿಸುತ್ತಿರುತ್ತದೆ. ಇಂದು ಓದಿದ ಒಂದು ಸಾಲು ನಾಳೆ ನಮ್ಮ ಆಲೋಚನೆಯಾಗಬಹುದು; ಒಂದು ಆಲೋಚನೆ ನಮ್ಮ ನಿರ್ಧಾರವಾಗಬಹುದು; ಆ ನಿರ್ಧಾರವೇ ನಮ್ಮ ಬದುಕಿನ ದಿಕ್ಕಾಗಬಹುದು. ಆದುದರಿಂದ, ಓದಲೆಂದು ಪುಸ್ತಕದ ಪುಟ ತೆರೆದಾಗಲೆಲ್ಲ, ನಮ್ಮೊಳಗಿನ ಒಂದು ಹೊಸ ಕಿಟಕಿಯೂ ತೆರೆದುಕೊಳ್ಳಲಿ; ಓದಿನ ಬೆಳಕು ನಮ್ಮ ಬದುಕಿನ ದಾರಿಯನ್ನೂ ಬೆಳಗಿಸಲಿ.



**ಡಾ. ಮೈತ್ರಿ ಭಟ್, ವಿಟ್ಲ.**



## 'ನಕಾರಾತ್ಮಕ' ಮನಸ್ಥಿತಿಯಿಂದ ದೂರವಿರಿ..!

ಆಗದು ಎಂದು ಕೈ ಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ, ಮನಸೊಂದಿದ್ದರೆ ಮಾರ್ಗವು ಉಂಟು....." ಈ ಸಾಲುಗಳನ್ನು ಕನ್ನಡಿಗರಾದ ನಾವು ಎಷ್ಟು ಸಲ ಕೇಳಿಲ್ಲ..!? ಅಣ್ಣವರು ಹಾಡಿದ 'ಬಂಗಾರದ ಮನುಷ್ಯ' ಚಲನಚಿತ್ರದ ಈ ಗೀತೆ ಎಂತಹವರಲ್ಲಿಯೂ ಸ್ಫೂರ್ತಿಯನ್ನು ತುಂಬಿ ಧನಾತ್ಮಕವಾಗಿ ಯೋಚಿಸುವಂತೆ ಮಾಡುತ್ತದೆ. ಇಂದು ನಮ್ಮ ಸುತ್ತಲಿನವರಲ್ಲಿ ಹೆಚ್ಚಿನವರ ಮನಸ್ಥಿತಿಯು ನಕಾರಾತ್ಮಕವಾಗಿರುವುದನ್ನು ನೋಡಬಹುದು. ಇಂತಹವರು ಪ್ರತಿಯೊಂದರಲ್ಲಿಯೂ ಸಮಸ್ಯೆಯನ್ನು ಹುಡುಕುತ್ತಾರೆ. ಇವರು ಎಲ್ಲದರಲ್ಲೂ ಹುಳುಕನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಾರೆ.

"ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ ನೆರೆಯಮನೆ ಸುಡುವುದೇ ಕೂಡಲಸಂಗಮದೇವಾ!" ಎಂದು ಬಸವಣ್ಣವರು ಅಂದು ಹೇಳಿದ್ದು ಇಂದಿಗೂ ಪ್ರಸ್ತುತವಲ್ಲವೇ! ನಾವು ಮತ್ತೊಬ್ಬರ ಬಗ್ಗೆ, ಸಮಾಜದ ಬಗ್ಗೆ ಕೊನೆಗೆ ತನ್ನ ಬಗ್ಗೆಯೇ ತಾನೇ ನಕಾರಾತ್ಮಕ ಭಾವನೆ ಹೊಂದಿರುವ ವ್ಯಕ್ತಿ ತಾನು ಮೊದಲು ಹಾಳಾಗಿ ತನ್ನ ಸುತ್ತಲಿನ ವಾತಾವರಣದಲ್ಲಿ ನಕಾರಾತ್ಮಕತೆಯನ್ನು ಹರಡಿಸುತ್ತಾನೆ. ಇಂತವರ ಗೆಳೆತನ, ಸಾಂಗತ್ಯದಲ್ಲಿ ಇದ್ದವರಿಗೂ ಇದು ಹರಡಬಹುದು. ನಕಾರಾತ್ಮಕತೆ ಹೊಂದಿದ ವ್ಯಕ್ತಿ "ತಾನು ವಿಷ ಕುಡಿದು ಮತ್ತೊಬ್ಬರ ಸಾವು ಬಯಸಿದಂತೆ" ಇಲ್ಲಿ ಅವನು ಮೊದಲು ಹಾಳಾಗುತ್ತಾನೆ.

ನೆಗೆಟಿವ್ ಮನಸ್ಥಿತಿಯವರ ಬಗ್ಗೆ ಹೀಗೊಂದು ಕಥೆ ನೆನಪಾಗುತ್ತದೆ. ಒಂದು ಊರಿನಲ್ಲಿ ಒಬ್ಬ ಕುಡುಕ ತಂದೆಗೆ ಇಬ್ಬರು ಮಕ್ಕಳು. ಮಕ್ಕಳು ದೊಡ್ಡವರಾದ ಮೇಲೆ ತಂದೆ ಕುಡಿದು, ಕುಡಿದು ಸಾಯುತ್ತಾನೆ. ಮೊದಲನೆಯ ಮಗ ಓದಿ ಅಧಿಕಾರಿಯಾಗಿ ಸಮಾಜದಲ್ಲಿ ಗೌರವಯುತ ಜೀವನ ನಡೆಸುತ್ತಾನೆ. ಎರಡನೆಯ ಮಗ ಚೆನ್ನಾಗಿ ಓದದೇ, ತಂದೆಯಂತೆ ಕುಡಿದು ಊರಿನಲ್ಲಿ ತಾನು ಮಾಡಿಕೊಂಡ ಜಗಳಗಳಿಂದ ಕೆಟ್ಟ ವ್ಯಕ್ತಿ ಆಗುತ್ತಾನೆ. ಇಬ್ಬರೂ ಒಂದೇ ಕುಟುಂಬದ, ಒಂದೇ ಪರಿಸ್ಥಿತಿಯಿಂದ ಬಂದಿದ್ದರೂ ಇಬ್ಬರ ಮನಸ್ಥಿತಿ ಬದಲಾವಣೆಗೆ ಕಾರಣ ಹುಡುಕಿದಾಗ ಮೊದಲನೆಯ ಮಗ ತನ್ನ ತಂದೆಯಿಂದ ಪಾಠ ಕಲಿತಿದ್ದ, ನಾನು ಕುಡಿದರೆ ತನ್ನ ತಂದೆಯಂತೆ ಸಮಾಜದಲ್ಲಿ ಯಾವುದೇ ಗೌರವವಿಲ್ಲದೇ, ರೋಗಗಳಿಂದ ನರಳಿ ಸಾಯಬೇಕಾಗುತ್ತದೆ. ಎರಡನೆಯ ಮಗ ತಂದೆಯನ್ನು ಅನುಕರಣೆ ಮಾಡಿದ್ದನು. ಅವನು ನನ್ನ ತಂದೆ ನನಗೆ ಏನೂ ಕಲಿಸಲಿಲ್ಲ, ಅವನನ್ನು ನೋಡಿ ನಾನು ಕುಡಿಯುವ ಚಟ ಕಲಿತೆ. ನಾನು ಕುಡಿದು ಹಾಳಾಗಲು ನನ್ನ ತಂದೆಯೇ ಕಾರಣ. ಇಬ್ಬರಿಗೂ ಅವರ ತಂದೆಯೇ ಕಾರಣ. ಒಂದು ಸನ್ನಿವೇಶವನ್ನು ನಾವು ನೋಡುವ ಮನಸ್ಥಿತಿಯಲ್ಲಿದೆ.

ಇಂದಿನ ಸಮಾಜದಲ್ಲಿ ಇನ್ನೊಂದಿಷ್ಟು ಇಂತಹ ನೆಗೆಟಿವ್ ಮನಸ್ಥಿಯಲ್ಲಿದ್ದಾರೆ ಎಂದರೆ, ನನಗೆ "ಸಿಕ್ಕಿದ್ದು ಮತ್ತೊಬ್ಬರಿಗೆ ಸಿಗಬಾರದು" ಎಂದು ಯೋಚಿಸುತ್ತಾರೆ. ಇವರಿಗಿಂತ ಮುಂಚೆ ಮತ್ತೊಬ್ಬರು ಏನಾದರೂ ಸಾಧನೆ ಮಾಡಿದರೆ ಇವರಿಗೆ ಅಸೂಯೆ, ಹುಟ್ಟೆಕಿಚ್ಚು. ಅದರ ಬಗ್ಗೆ ಟೀಕೆ ಮಾಡುತ್ತಾರೆ. ಅಲ್ಲದೆ ಮತ್ತೊಬ್ಬರ ಸಾಧನೆಯನ್ನು ಹೀಯಾಳಿಸುತ್ತಾರೆ. ಕೆಲವೊಮ್ಮೆ ಇವರು ಮುಖದ ಮುಂದೆ ಚೆನ್ನಾಗಿ ಮಾತನಾಡಿ ಹಿಂದೆ ತೆಗಳುತ್ತಾರೆ. ಸ್ವತಃ ಇವರಿಗೂ ಸಾಧಿಸಲಾಗುವುದಿಲ್ಲ, ಸಾಧಿಸಿದವರನ್ನು ನಿಂದಿಸಿ ತಮ್ಮ ನೆಗೆಟಿವ್ ಮನಸ್ಥಿತಿಯನ್ನು ತೋರಿಸಿಕೊಳ್ಳುತ್ತಾರೆ. ಇಂತಹವರಿಗೆ ಯಾವುದರ ಬಗ್ಗೆಯೂ ಉತ್ಸಾಹ ಇರುವುದಿಲ್ಲ. ಇವರ ಮುಂದೆ ಏನೆ ಹೇಳಿದರು ನಕಾರಾತ್ಮಕವಾಗಿಯೇ ಸ್ಪಂದಿಸುತ್ತಾರೆ. ಇವರೊಂದು ತರಹ ಬಾವಿಯ ಕಪ್ಪೆಗಳಂತೆ. ತಮಗೊಬ್ಬರಿಗೆ ಎಲ್ಲಾ ಗೊತ್ತಿದೆ ಮತ್ತೊಬ್ಬರಿಗೆ ಏನೂ ಗೊತ್ತಿಲ್ಲ ಎಂಬ ಭಾವನೆ ಹೊಂದಿರುತ್ತಾರೆ. ತಾನು ಮಾಡಿದ್ದು ಸರಿ ಎಂಬ ಕಲ್ಪನೆಯಲ್ಲಿರುತ್ತಾರೆ. ಇವರು ಸಕಾರಾತ್ಮಕವಾಗಿ ಯೋಚಿಸಲು ಹೋಗುವುದಿಲ್ಲ. ಇವರೊಂದಿಗೆ ವಾದಕ್ಕಿಳಿದರೂ ಏನೂ ಪ್ರಯೋಜನವಿಲ್ಲ.

ನೆಗೆಟಿವ್ ಮನಸ್ಥಿತಿಯವರು ತಮ್ಮ ತಪ್ಪನ್ನು ತಾವು

**ಅಂಕಣ: ಸಾಧನಾ ಪಥ**

ಒಪ್ಪಿಕೊಳ್ಳುವುದಿಲ್ಲ. ಅದಕ್ಕೆ ಮತ್ತೊಬ್ಬರ ಕಡೆ ಬೆರಳು ಮಾಡುತ್ತಾರೆ. ಇಲ್ಲವೇ ಮತ್ತೇನೊ ಕಾರಣವನ್ನು ಹೇಳುತ್ತಾರೆ. ಇಂದು ಸಾಮಾಜಿಕ ಜಾಲತಾಣಗಳನ್ನು ನೋಡಿದರೆ ಸಾಕಷ್ಟು ನೆಗೆಟಿವ್ ಕಮೆಂಟ್ ಮಾಡಿರುವವರೇ ಜಾಸ್ತಿ ಇರುತ್ತಾರೆ. ಇವರು ಎಲ್ಲದಕ್ಕೂ ನೆಗೆಟಿವ್ ಆಗಿಯೇ ಪ್ರತಿಕ್ರಿಯೆಸುತ್ತಾರೆ. ಇವರ ಮೈಂಡ್ ಸೆಟ್ ಹಾಗೆಯೇ ಇರುತ್ತದೆ. ಇವರು ಸಾಮಾಜಿಕ ಜಾಲತಾಣಗಳಲ್ಲಿ ನೋಡುವ ವಿಷಯ ವಸ್ತುಗಳು ನೆಗೆಟಿವ್ ಇರುತ್ತವೆ. ಇಂತಹವುಗಳನ್ನು ನೋಡಿ ಮತ್ತಷ್ಟು ನೆಗೆಟಿವ್ ಮನಸ್ಥಿತಿ ಬೆಳೆಸಿಕೊಳ್ಳುತ್ತಾರೆ. ಇಂದು ಜನ ಹೆಚ್ಚಾಗಿ ಇಂತಹ ನೆಗೆಟಿವ್ ವಿಷಯಗಳನ್ನು ನೋಡುವುದರಿಂದ ಮೀಡಿಯಾದವರು ಅಂತಹವುಗಳನ್ನೇ ಹೆಚ್ಚಾಗಿ ತೋರಿಸುತ್ತಾರೆ.

ನೆಗೆಟಿವ್ ಮನಸ್ಥಿತಿಯವರು ಸಕಾರಾತ್ಮಕವಾಗಿ ಯೋಚಿಸುವುದನ್ನು ಕಲಿಯಬೇಕು. "ಸರ್ವೇ ಜನಃ ಸುಖಿನೋಭವಂತು" ಎಂಬ ವಾಕ್ಯವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಎಲ್ಲರೂ ಚೆನ್ನಾಗಿರಲಿ ಎಂದು ಬೇಡಿಕೊಂಡಾಗ ತನ್ನಷ್ಟಕ್ಕೆ ತಾನೇ ಮನಸ್ಸಿನಲ್ಲಿ ಸಕಾರಾತ್ಮಕ ಅಂಶಗಳು ಮೂಡುತ್ತವೆ. ನಾವು ಜೀವನ ನೋಡುವ ರೀತಿ ಬದಲಾಗಬೇಕು. ದೇವರು ನಮಗೆ ಎಷ್ಟು ಕಷ್ಟ ಕೊಟ್ಟಿದ್ದಾನೆ, ಎಂದು ಭಾವಿಸುವ ಬದಲು ನಮಗಿಂತಲೂ ಬಡತನದಲ್ಲಿದ್ದವರನ್ನು ನೋಡಬೇಕು. ನಮಗೆ ಕೈ ಕಾಲು, ಕಣ್ಣು, ಕಿವಿ, ಮೂಗು ಎಲ್ಲಾ ಅಂಗಾಂಗಗಳನ್ನು ಕೊಟ್ಟಿದ್ದಕ್ಕೆ ದೇವರಿಗೆ ಧನ್ಯವಾದ ಹೇಳಬೇಕು. ರಾತ್ರಿ ಮಲಗಿದ್ದವರು ಬೆಳಿಗ್ಗೆ ಏಳುವುದಿಲ್ಲ, ನಾವು ಎದ್ದಿದ್ದರೆ ದೇವರಿಗೆ ಥ್ಯಾಂಕ್ಸ್ ಹೇಳಬೇಕು. ಮತ್ತೊಬ್ಬರ ಆಸ್ತಿ, ಅಂತಸ್ತು, ಸಾಧನೆ, ಅಧಿಕಾರಗಳನ್ನು ನೋಡಿ ಮನಸ್ಥಿತಿಯನ್ನು ನೆಗೆಟಿವ್ ಮೋಡ್ ಗೆ ತಳ್ಳುವುದಕ್ಕಿಂತ ನಮ್ಮಲ್ಲಿರುವ ಸಂಪತ್ತಿನ ಬೆಲೆ ಅರಿತು ಸಕಾರಾತ್ಮಕ ಭಾವನೆ ಮೂಡಿಸಿಕೊಳ್ಳೋಣ.



**ಬಸವರಾಜ ಹೊನಗೌಡರ.**

## 'ಸಂಗೀತ ಯಾನ'

ವಿದ್ಯಾಳಿಗೆ ಕಾರ್ಯಕ್ರಮ ಮಾಡಬೇಕು ಎಂದು ಆಸೆ ಇದ್ದರೂ ವಿದ್ಯಾಳ ಆರ್ಥಿಕ ಪರಿಸ್ಥಿತಿ ಕಷ್ಟ ಇದ್ದ ಕಾರಣ ಕಾರ್ಯಕ್ರಮದ ಖರ್ಚು ವೆಚ್ಚ ಸರಿದೂಗಿಸುವುದು ಕಷ್ಟವೆಂದು ಗುರುಗಳಿಗೆ ಅರ್ಥವಾಗಿತ್ತು.ಅದಕ್ಕೆ ಗುರುಗಳೇ ಪರಿಹಾರವನ್ನು ಕೂಡಾ ಸೂಚಿಸಿದ್ದರು.ಯಾರಾದರೂ ಸ್ಪಾನ್ಸರ್ ಮಾಡುತ್ತಾರೆ ಹುಡುಕು ಎಂದು ವಿದ್ಯಾ ಳಿಗೆ ಸೂಚಿಸಿದರು.ಹಾಗೆಯೇ ಅಲ್ಪ ಸ್ವಲ್ಪ ವಿದ್ಯಾರ್ಥಿಗಳು ಹಣ ಹಾಕುತ್ತಾರೆ.ಉಳಿದುದನ್ನು ನೀನು ಹಾಕಿ ಕಾರ್ಯಕ್ರಮ ಮಾಡು ಎಂದು ಸಲಹೆ ಇತ್ತರು. ಅಂದಿನಿಂದ ವಿದ್ಯಾ ದಾನಿಗಳನ್ನು ಹುಡುಕತೊಡಗಿದಳು.ಕಾಲೇಜ್ ಮುಗಿಯುತ್ತಿದ್ದಂತೆಯೇ ಸೈಕಲ್ ಏರಿ ಕೆಲವು ಸ್ಥಳೀಯರನ್ನು ಭೇಟಿ ಮಾಡಿದಳು. ತ್ಯಾಗರಾಜರ ಆರಾಧನೆಯ ಬಗೆಗೆ ಏನೂ ಮಾಹಿತಿ ಇರದೇ ಇರುವ ಜನಗಳೇ ಜಾಸ್ತಿ. ಆದರೆ ವಿದ್ಯಾ ತಾಳ್ಮೆಮತ್ತು ವಿನಯದಿಂದ ಅವರಿಗೆ ಮನದಟ್ಟು ಮಾಡಿ ಒಂದು ಉತ್ತಮ ಸಂಗೀತ ಕಾರ್ಯಕ್ರಮಕ್ಕೆ ತಾವು ಸಹಾಯ ಮಾಡಬೇಕೆಂದು ಕೇಳಿಕೊಂಡಳು.ಎಲ್ಲರಿಗೂ ಭಟ್ಟರ ಮಗಳೆಂದೇ ಪರಿಚಯವಾದ ವಿದ್ಯಾ ಈಗ ಅದೇನೋ ಕಾರ್ಯಕ್ರಮ ಮಾಡ್ತಾಳಂತೆ ಅಂತ ಅರಿತುಕೊಂಡು ಕೈಲಾದಷ್ಟು ಸಹಾಯ ಮಾಡಿದರು.ವಿದ್ಯಾ ಯಾರ್ಯಾರು ಸಹಾಯ ಮಾಡುತ್ತಾರೋ ಆ ದಾನಿಗಳ ಪಟ್ಟಿಯನ್ನು ಮಾಡಿಕೊಂಡು ಅವರಿಗೆ ಕೃತಜ್ಞತೆ ಸಲ್ಲಿಸಿ ಕಾರ್ಯಕ್ರಮಕ್ಕೆ ಅವರನ್ನು ಆಹ್ವಾನಿಸಿದಳು. ಆಹ್ವಾನ ಪತ್ರಿಕೆಯನ್ನು ಕಡಿಮೆ ವೆಚ್ಚದಲ್ಲಿಯೇ ಊರಿನ ಹುಡುಗಿ ಎಂಬ ಕಾರಣಕ್ಕೆ ಯಾರೋ ಪ್ರೆಸ್ ನವರೊಬ್ಬರು ಮಾಡಿಕೊಟ್ಟರು. ಆದರೆ ಇವೆಲ್ಲದರ ಹಿಂದೆ ವಿದ್ಯಾಳ ಶ್ರಮ ಅಧಿಕವಾಗಿತ್ತು.ವಿದ್ಯಾ ಕಾಲೇಜ್ ಮುಗಿಸಿದೊಡನೆಯೇ ಪತ್ರಿಕೆ ಹಿಡಿದು ಮನೆ ಮನೆಗೆ ಸೈಕಲ್ ನಲ್ಲಿ ತೆರಳಿ ಕಾರ್ಯಕ್ರಮಕ್ಕೆ ಆಮಂತ್ರಿಸುತ್ತಿದ್ದಳು.

**ಅಂಕಣ: ಬದುಕಿನ ಬುತ್ತಿ**

ವಿದ್ಯಾ ಇದರ ಮಧ್ಯೆ ತನ್ನ ಸಂಗೀತ ತರಗತಿಯನ್ನು ಕೂಡಾ ನೆಡೆಸಬೇಕಿತ್ತು.ಕಾರ್ಯಕ್ರಮದಲ್ಲಿ ಹಾಡಲು ವಿದ್ಯಾ ಮಕ್ಕಳನ್ನು ತಯಾರಿ ಮಾಡುತ್ತಿದ್ದಳು.ಸುಲಭವಾದ 4–5 ದೇವರನಾಮ ಗಳನ್ನು ಮಕ್ಕಳಿಗೆ ಗುಂಪಾಗಿ ಹಾಡಲು ತಯಾರಿಗೊಳಿಸುತ್ತಿದ್ದಳು.ತಾನು ಹಾಡಲು ಅಭ್ಯಾಸ ಮಾಡಬೇಕಿತ್ತು. ಜೊತೆಗೆ ಕಾಲೇಜು ಪಾಠ ಪ್ರವಚನ ಮನೆಯ ಜವಾಬ್ದಾರಿ ಒಂದೋ ಎರಡೋ ವಿದ್ಯಾಳಿಗೆ ಸುಸ್ತಾಗಿ ಬಿಡುತ್ತಿತ್ತು.ಆದರೂ ಕಾರ್ಯಕ್ರಮ ಮಾಡಿ ಅದರಲ್ಲಿ ಯಶಸ್ಸು ಗಳಿಸಬೇಕೆಂಬ ಛಲ ವಿದ್ಯಾಳಿಗೆ.ಅಮರೇಂದ್ರ ಜೋಯಿಸ್ ರವರು ಕಾರ್ಯಕ್ರಮಕ್ಕೆ ಸಹಕಾರ ಕೊಟ್ಟರು.ವಿದ್ಯಾಳ ವಿದ್ಯಾರ್ಥಿಗಳ ಪೋಷಕರು ತಮ್ಮ ಕೈಲಾದ ಸಹಾಯ ಮಾಡಿದರು.ಕಲಾವಿದರಿಗೆ ಸನ್ಮಾನ, ಬಂದವರಿಗೆಲ್ಲಾ ಉಪಹಾರದ ವ್ಯವಸ್ಥೆ, ಕಾರ್ಯಕ್ರಮ ಮಾಡಲು ಜಾಗದ ವ್ಯವಸ್ಥೆ,ಪಕ್ಕವಾದ್ಯದವರಿಗೆ ಸಂಭಾವನೆ, ಮೈಕ್ ಸೆಟ್ ವ್ಯವಸ್ಥೆ ಹೀಗೆ ಖರ್ಚು ವೆಚ್ಚ ಬಹಳವಾಗಿತ್ತು.ಆದರೆ ವಿದ್ಯಾ ಗುರುಗಳ ಮಾರ್ಗದರ್ಶನದಿಂದ ಎಲ್ಲವನ್ನು ಒಂದೊಂದಾಗಿ ನಿಭಾಯಿಸಲು ಮಾರ್ಗವನ್ನುಕಂಡುಕೊಂಡಳು. ಸ್ವಲ್ಪ ಟೆನ್ಷನ್ ಮಾಡಿಕೊಳ್ಳುತ್ತಿದ್ದುದು ವಿದ್ಯಾ ಅಮ್ಮನ ಮುಂದೆ ಮಾತ್ರ.ಆದರೆ ವಿದ್ಯಾಳ ಅಮ್ಮನಿಗೆ ಅವಳ ಮೇಲೆ ನಂಬಿಕೆ.ನೀನು ಎಲ್ಲಾ ಕೆಲಸ ಮಾಡಿಯೇ ಮಾಡುತ್ತಿಯ ಧೈರ್ಯವಾಗಿರು ಎಂದು ಅವಳಲ್ಲಿ ಆತ್ಮ ವಿಶ್ವಾಸ ತುಂಬುತ್ತಿದ್ದರು.

ಕಾರ್ಯಕ್ರಮಕ್ಕೆ ಎಲ್ಲಾ ರೀತಿಯ ಸಿದ್ಧತೆಗಳು ಆಯಿತು.ಸ್ಥಳವನ್ನು ಸಂಗೀತ ಕಾರ್ಯಕ್ರಮಕ್ಕೆ ಎಂದು ಬಹಳ ಕಡಿಮೆ ವೆಚ್ಚದಲ್ಲಿಯೇ ಕೊಟ್ಟರು.ಕಾರ್ಯಕ್ರಮಕ್ಕೆ ವಿದ್ಯಾಳ ದೊಡ್ಡಗುರುಗಳು ಅಂದರೆ ಗುರುಗಳ ತಂದೆಯವರು,ವಿದ್ಯಾಳ ಗುರುಗಳು,ವಿದ್ಯಾ ಳ ಕಾಲೇಜಿನ ಪ್ರಿನ್ಸಿಪಾಲರು,ಶೃಂಗೇರಿ ಕೊಪ್ಪದಿಂದ ಪಕ್ಕವಾದ್ಯದವರು ಬಂದಿದ್ದರು.ಸುಮಾರು 200 ಜನರಷ್ಟು ಕಾರ್ಯಕ್ರಮದಲ್ಲಿ ಸೇರಿದ್ದರು.ವಿದ್ಯಾ



ತನ್ನ ಊರಿನಲ್ಲಿಯೂ ಕೆಲವು ಜನರನ್ನು ಆಹ್ವಾನಿಸಿದ್ದಳು.ವಿದ್ಯಾಳ ಮೇಲೆ ಅಭಿಮಾನವಿದ್ದ ಕೆಲವರು ಕಾರ್ಯಕ್ರಮಕ್ಕೆ ಆಗಮಿಸಿದ್ದರು.

ಮುಂದುವರಿಯುತ್ತದೆ...

ಜಂಬೆ ಎಸ್ ವಿದ್ಯಾರಾಣಿ. ಹತ್ತಾರು ಕಲಾವಿದರಿಗೆ ವೇದಿಕೆ ಕಲ್ಪಿಸಿ ಕೊಡುತ್ತಿದ್ದರು.ಅವರು ಸಂಗೀತ ಶಿಕ್ಷಕರಾಗಿದ್ದು ಸರ್ಕಾರಿ ಸೇವೆಯಲ್ಲಿದ್ದುದರಿಂದ ಇದೆಲ್ಲಾ ಸಾಧ್ಯವಾಗಿತ್ತು."ಕೆರೆಯ ನೀರನು ಕೆರೆಗೆ ಚೆಲ್ಲಿ"ಎಂದು ಯಾವಾಗಲೂ ಹೇಳುತ್ತಾ ಸಂಗೀತದಿಂದ ದುಡಿದ ಹಣದಲ್ಲಿ ಸ್ವಲ್ಪ ಭಾಗ ಇಂತಹಾ ಕಾರ್ಯಕ್ರಮ ಗಳಿಗೆ ವಿನಿಯೋಗಿಸುತ್ತಿದ್ದರು.

ಗುರುಗಳು ಯಾವಾಗಲೂ ವಿದ್ಯಾಳಿಗೆ ಸಂಗೀತ ಕಲಿಯುವ ಪ್ರತಿಯೊಬ್ಬ ವಿದ್ಯಾರ್ಥಿಯು ತ್ಯಾಗರಾಜರ ಆರಾಧನೆಯನ್ನು ಮಾಡಲೇ ಬೇಕು ಎಂದು ಯಾವಾಗಲೂ ಹೇಳುತ್ತಿದ್ದರು.ಆದರೆ ಈ ರೀತಿಯ ಕಾರ್ಯಕ್ರಮ ವಿದ್ಯಾ ತನ್ನ ಊರಿನಲ್ಲಿ ಮಾಡಲು ಧೈರ್ಯ ಸಾಲದೇ ಸುಮ್ಮನಿದ್ದಳು.ಎಲ್ಲೋ ಮನದ ಮೂಲೆಯಲ್ಲಿ ತಾನೂ ಈ ರೀತಿಯ ಕಾರ್ಯಕ್ರಮ ಮಾಡುವುದರ ಮೂಲಕ ತ್ಯಾಗರಾಜ ಸ್ವಾಮಿಗಳ ಸೇವೆಯನ್ನು ಮಾಡಬೇಕು ಎಂಬ ಆಸೆ ಇತ್ತು.



**ಜಂಬೆ.ಎಸ್.ವಿದ್ಯಾರಾಣಿ.**

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka